# 2021-22 ನೇ ಸಾಲಿನ ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು ಯೋಜನೆ, ಲೆಕ್ಕಶೀರ್ಷಿಕೆ: 2406-02-112-0-17 ಅನುಷ್ಠಾನದ ಮಾರ್ಗಸೂಚಿ:

## I. ಯೋಜನೆಯ ಹೆಸರು: *ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು*

## II. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:

ಕರ್ನಾಟಕ ರಾಜ್ಯವು ವೈವಿಧ್ಯಮಯ ಹವಾಗುಣ, ಫಲವತ್ತಾದ ಭೂಮಿ, ಉತ್ಕೃಷ್ಟ ಜಲಸಂಪನ್ಮೂಲ ಹೊಂದಿದ್ದು, ಸಮುದ್ರ ಮಟ್ಟಕ್ಕಿಂತ ಎತ್ತರದಲ್ಲಿರುವ ಗಿರಿಧಾಮಗಳು, ಉದ್ಯಾನವನಗಳು ಮತ್ತು ತೋಟಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಈ ಹವಾಗುಣ ಸೂಕ್ತವಾಗಿದೆ.

ಉದ್ಯಾನವನಗಳು ಉತ್ತಮ ಸಮಾಜದ ಮತ್ತು ಉತ್ಕೃಷ್ಟ ನಾಗರೀಕತೆಯ ಸಂಕೇತಗಳಾಗಿವೆ. ಉದ್ಯಾನಗಳ ಸಂರಕ್ಷಣೆಗಾಗಿ ಘನ ರಾಜ್ಯ ಸರ್ಕಾರವು ***ಕರ್ನಾಟಕ ಸರ್ಕಾರಿ ಉದ್ಯಾನವನಗಳ ಸಂರಕ್ಷಣೆ ಅಧಿನಿಯಮ, 1975*** ಕಾಯ್ದೆಯನ್ನು ಜಾರಿಗೊಳಿಸಿರುತ್ತದೆ. ಈ ಸಂರಕ್ಷಣಾ ಕಾಯ್ದೆಯಡಿ ಹಲವಾರು ಪ್ರಮುಖ ಐತಿಹಾಸಿಕ ಉದ್ಯಾನವನಗಳು, ಗಿರಿಧಾಮಗಳನ್ನು ತೋಟಗಾರಿಕೆ ಇಲಾಖೆಯು ಸುಧೀರ್ಘ ಕಾಲದಿಂದಲೂ ಸಮರ್ಪಕವಾಗಿ ಸಂರಕ್ಷಿಸಿ, ನಿರ್ವಹಿಸಿಕೊಂಡು ಬರುತ್ತಿದೆ.

ಅಂದಿನ ಅರಸರಾದ ಹೈದರಾಲಿ, ಟಿಪ್ಪು ಸುಲ್ತಾನ್, ಮೈಸೂರು ಅರಸರು ಮತ್ತು ಬ್ರಿಟೀಷರ ಆಡಳಿತದ ಕಾಲದಲ್ಲಿ ಸ್ಥಾಪಿತಗೊಂಡು ವಿವಿಧ ಸ್ಥಳಗಳಲ್ಲಿ ಅಭಿವೃದ್ಧಿಗೊಂಡ ಉದ್ಯಾನವನಗಳಾದ ಲಾಲ್‌ಬಾಗ್ ಸಸ್ಯತೋಟ, ಕಬ್ಬನ್ ಪಾರ್ಕ್, ಬೃಂದಾವನ ಉದ್ಯಾನವನಗಳನ್ನು ಮತ್ತು ರಾಜರುಗಳ ಬೇಸಿಗೆ ತಂಗುದಾಣಗಳಾದ ನಂದಿ ಗಿರಿಧಾಮ, ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ, ಕರ್ನಾಟಕ ಸಿರಿ ತೋಟಗಾರಿಕೆ ಉದ್ಯಾನವನ, ಫರ್ನ್ ಹಿಲ್ ಗಿರಿಧಾಮಗಳನ್ನು ಇಲಾಖಾವತಿಯಿಂದ ಅಭಿವೃದ್ಧಿಗೊಳಿಸಿ ನಿರ್ವಹಿಸಲಾಗುತ್ತಿದೆ. ನೀರಾವರಿ ಜಲಾಶಯದ ಯೋಜನಾ ಪ್ರದೇಶಗಳಲ್ಲಿನ ಪಂಪಾವನ, ಹ್ಯೂಮ್ ಪಾರ್ಕ್, ಹಿಡಕಲ್ ಡ್ಯಾಂ, ಬೃಂದಾವನ ಉದ್ಯಾನವನ ಹೀಗೆ ರಾಜ್ಯದಾದ್ಯಂತ ಇರುವ ಒಟ್ಟು 23 ಉದ್ಯಾನವನಗಳ ನಿರ್ವಹಣೆಯ ಜೊತೆಗೆ 2015-16ನೇ ಸಾಲಿನ ಆಯವ್ಯಯ ಭಾಷಣದಂತೆ ಮೈಸೂರಿನ ಕುಪ್ಪಣ್ಣ ಪಾರ್ಕ, ದಾವಣಗೆರೆಯ ಶಾಮನೂರು ಗ್ರಾಮದಲ್ಲಿ ಗಾಜಿನ ಮನೆ ನಿರ್ಮಾಣ ಹಾಗೂ ಮೈಸೂರು ಜಿಲ್ಲೆಯ ಪಾರಂಪರಿಕ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಸುಂದರ ಉದ್ಯಾನವನ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದ್ದು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಹಾಗೂ 2017-18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಬೆಂಗಳೂರಿನಲ್ಲಿರುವ ಇಂದಿರಾಗಾಂಧಿ ಸಂಗೀತ ನೃತ್ಯ ಕಾರಂಜಿ ಮತ್ತು ಉದ್ಯಾನವನದ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, ಜೀವ ವೈವಿಧ್ಯತೆಯನ್ನು ವೃದ್ಧಿಸಿ ಸಂರಕ್ಷಿಸಲು ಡಾ॥ಎಂ.ಹೆಚ್ ಮರಿಗೌಡ ಸಸ್ಯ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ, ದೊಡ್ಡಸಾಗ್ಗೆರೆ, ಪೂರ್ವ ಲಾಲ್ ಬಾಗ್ ಕನ್ನಮಂಗಲ, ತೆರಕನಹಳ್ಳಿ ಸಸ್ಯ ಶಾಸ್ತ್ರೀಯ ತೋಟ, ಶಿರಸಿ, ಲಿಂಗಾಬೂದಿ ಸಸ್ಯ ಶಾಸ್ತ್ರೀಯ ತೋಟ ಮೈಸೂರು, ಸರ್ ಎಂ. ವಿಶ್ವೇಶ್ವರಯ್ಯ ಸಸ್ಯಶಾಸ್ತ್ರೀಯ ತೋಟ ಚಿಕ್ಕಬಳ್ಳಾಪುರ ಇವುಗಳನ್ನು ವಿಶೇಷ ಒತ್ತು ನೀಡಿ ಅಭಿವೃಧ್ಧಿಗೊಳಿಸಲಾಗುತ್ತಿದೆ.

***ಯೋಜನೆಯ ಉದ್ದೇಶ:***

1. ***ಕರ್ನಾಟಕ ಸರ್ಕಾರಿ ಉದ್ಯಾನವನಗಳ ಸಂರಕ್ಷಣೆ ಅಧಿನಿಯಮ, 1975 ರ*** ಕಾಯ್ದೆಯಡಿ ಬರುವ ಎಲ್ಲಾ ಉದ್ಯಾನವನಗಳು, ಸಸ್ಯ ಶಾಸ್ತ್ರೀಯ ತೋಟಗಳು ಮತ್ತು ಗಿರಿಧಾಮಗಳ ಸಂರಕ್ಷಣೆ ಹಾಗೂ ಸೂಕ್ತ ನಿರ್ವಹಣೆಯನ್ನು ಕೈಗೊಳ್ಳುವುದು.
2. ತೋಟಗಾರಿಕೆ ಇಲಾಖೆಯ ಕ್ಷೇತ್ರಗಳಲ್ಲಿ ಜೀವ ವೈವಿಧ್ಯತೆಯನ್ನು ವೃದ್ಧಿಸುವ ಸಂಬಂಧ ನಿಗದಿಪಡಿಸಿರುವ್ ಕ್ಷೇತ್ರಗಳನ್ನು ಉದ್ಯಾನವನಗಳನ್ನಾಗಿ ಮಾರ್ಪಡಿಸಿ ನಿರ್ವಹಿಸುವುದು.
3. ಉದ್ಯಾನವನಗಳು ಮತ್ತು ತೋಟಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಅಥವಾ ಇತರೆ ಮೂಲಗಳಿಂದ ಇಲಾಖೆಗೆ ಹಸ್ತಾಂತರಿಸಿದ ಭೂಪ್ರದೇಶಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಿ ನಿರ್ವಹಿಸುವುದು.
4. ಉದ್ಯಾನವನಗಳು ಮತ್ತು ತೋಟಗಳಲ್ಲಿ ಜೀವ ವೈವಿಧ್ಯವನ್ನು ಹೆಚ್ಚಿಸುವುದು.
5. ಉದ್ಯಾನವನಗಳ ಎಲ್ಲಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸುವುದು (ಹುಲ್ಲುಹಾಸು, ಸಸ್ಯ ಪ್ರಭೇದಗಳ ನಿರ್ವಹಣೆ, ನೀರಿನ ಸೌಕರ್ಯ, ತ್ಯಾಜ್ಯ ನಿರ್ವಹಣೆ, ವಿದ್ಯುತ್ ನಿರ್ವಹಣೆ, ಜಾಗರ್ಸ್ ಪಾತ್, ಕಾರಂಜಿಗಳು, ಹೂದೋಟಗಳ ನಿರ್ವಹಣೆ ಇತ್ಯಾದಿ.)
6. ಗಿರಿಧಾಮಗಳಲ್ಲಿರುವ ತಂಗುದಾಣ/ಅತಿಥಿಗೃಹಗಳ ಸೂಕ್ತ ನಿರ್ವಹಣೆ, ನವೀಕರಣ ಹಾಗೂ ಅವಶ್ಯ ಮೂಲ ಭೂತ ಸೌಕರ್ಯಗಳ ನಿರ್ವಹಣೆ.
7. ಉದ್ಯಾನವನ ಮತ್ತು ತೋಟಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಭೂದೃಶ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.
8. ಉದ್ಯಾನವನಗಳಲ್ಲಿನ ಸಸ್ಯಾಗಾರಗಳಲ್ಲಿ ಆಕರ್ಷಕ ಅಲಂಕಾರಿಕ ಗಿಡಗಳ ಉತ್ಪಾದನೆ ಮತ್ತು ಮಾರಾಟವನ್ನು ಕೈಗೊಳ್ಳುವುದು.
9. ಸಸ್ಯಶಾಸ್ತ್ರೀಯ ತೋಟಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ, ನಿರ್ವಹಿಸುವುದು.

***ಮಾರ್ಗಸೂಚಿ:***

1. ಲಾಲ್‌ಬಾಗ್ ಸಸ್ಯತೋಟ, ಕಬ್ಬನ್ ಉದ್ಯಾನವನ ಹಾಗೂ ರಾಜ್ಯಾದಾದ್ಯಂತ ಇಲಾಖಾ ವ್ಯಾಪ್ತಿಯಲ್ಲಿರುವ ವಿವಿಧ ಉದ್ಯಾನವನಗಳು, ಸಸ್ಯ ಶಾಸ್ತ್ರೀಯ ತೋಟಗಳು ಮತ್ತು ಗಿರಿಧಾಮಗಳನ್ನು ಪರಿಸರ ಸಂರಕ್ಷಣಾ, ಪರಿಸರ ಸ್ನೇಹಿ ಪ್ರವಾಸಿ ಕೇಂದ್ರ ಹಾಗೂ ಆರೋಗ್ಯಕರ ತಾಣಗಳಾಗಿ ಪರಿವರ್ತಿಸಿ ಸಸ್ಯ ಮತ್ತು ಗಿಡಗಳ ಸಂರಕ್ಷಣೆಗೆ ಧಕ್ಕೆಯಾಗದಂತೆ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವುದು ಹಾಗೂ ಕಾಲ-ಕಾಲಕ್ಕೆ ಅವಶ್ಯ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುವುದು.
2. ಅಲಂಕಾರಿಕ ಸಸ್ಯಗಳ ಉತ್ಪಾದನೆ, ಹುಲ್ಲುಹಾಸುಗಳನ್ನು ಪುನಶ್ಚೇತಗೊಳಿಸುವುದು, ಅಪರೂಪದ ಸಸ್ಯ ಪ್ರಭೇದಗಳನ್ನು ಪರಿಚಯಿಸುವುದು ಹಾಗೂ ಇತರೇ ಎಲ್ಲಾ ಅವಶ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು.
3. ಇಲಾಖೆಯ ವ್ಯಾಪ್ತಿಯಲ್ಲಿರುವ ಉದ್ಯಾನವನಗಳು ಮತ್ತು ಗಿರಿಧಾಮಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಉತ್ತಮ ಪ್ರವಾಸಿ ತಾಣವನ್ನಾಗಿಸುವುದು.
4. ಗಿರಿಧಾಮಗಳ ವಸತಿ ಸೌಕರ್ಯ, ಅತಿಥಿ ಗೃಹಗಳ ನವೀಕರಣ, ಮಕ್ಕಳ ಆಟದ ವ್ಯವಸ್ಥೆ ಹಾಗೂ ನೀರಿನ ಸೌಕರ್ಯ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.
5. ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಆಗಿಂದಾಗ್ಗೆ ತೋಟಗಾರಿಕೆ ನಿರ್ದೇಶಕರು/ಜಂಟಿ ನಿರ್ದೇಶಕರು ನೀಡುವ ಮಾರ್ಗಸೂಚಿಗಳನ್ನು ಪಾಲಿಸುವುದು.
6. ಯೋಜನೆಯನ್ನು ಅನುಷ್ಠಾನಗೊಳಿಸುವಾಗ K.T.P.P ಕಾಯ್ದೆ ಹಾಗೂ K.T.C ಯ ಅನುಸಾರ ಮತ್ತು ಸರ್ಕಾರದಿಂದ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ತಪ್ಪದೆ ಪಾಲಿಸುವುದು.
7. ಸದರಿ ಯೋಜನೆಯಡಿ ಕಛೇರಿಗೆ ಅವಶ್ಯವಿರುವ ಪೀಠೋಪಕರಣಗಳನ್ನು ಖರೀದಿಸಲು ಅವಕಾಶವಿರುವುದಿಲ್ಲ.
8. ಎಂ.ಪಿ.ಕ್ ಅನುಷ್ಠಾನಗೊಳಿಸುವಾಗ ಸಕ್ಷಮ ಅಧಿಕಾರಿಗಳಿಂದ ಸೂಕ್ತ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ತಪ್ಪದೆ ಪಡೆಯುವುದು.
9. ಎಂ.ಪಿ.ಕ್ ಅನುಮೋದನೆಯಾದ ಮೊದಲನೇ ತಿಂಗಳ ಅಂತ್ಯದೊಳಗೆ ನಿಯಮಾನುಸಾರ ಟೆಂಡರ್ ಕರೆಯುವುದು ಹಾಗೂ ಸದರಿ ಮಾಹೆಯ ಪ್ರಗತಿಯನ್ನು ಸಾಧಿಸುವುದು.

10. ಇಲಾಖಾ ವ್ಯಾಪ್ತಿಯಲ್ಲಿರುವ ಉದ್ಯಾನವನಗಳು, ಗಿರಿಧಾಮಗಳು ಮತ್ತು ಸಸ್ಯ ಶಾಸ್ತ್ರೀಯ ತೋಟಗಳಲ್ಲಿ ಭೂದೃಶ್ಯ ಕಾಮಗಾರಿಗಳನ್ನು ಕೈಗೊಳ್ಳುವಾಗ ಇಲಾಖೆಯ ಭೂದೃಶ್ಯ ವಿಭಾಗದಿಂದ ವಿನ್ಯಾಸ ಮತ್ತು ಅಂದಾಜು ಪಟ್ಟಿಯನ್ನು ಪಡೆಯುವುದು ಹಾಗೂ ಅನುಮೋದನೆ ಪಡೆಯುವುದು ಮತ್ತು ಕಾಮಗಾರಿಗಳು ಪೂರ್ಣಗೊಂಡ ನಂತರ ಕಾಮಗಾರಿ ಮುಕ್ತಾಯಗೊಂಡ ಬಗ್ಗೆ ತಪ್ಪದೇ Work Completion Report ಪಡೆಯುವುದು.
11. ಉದ್ಯಾನವನ ನಿರ್ವಹಣಾ ಕಾರ್ಯವನ್ನು ಇಲಾಖಾ ಎಸ್ ಆರ್ ದರದನ್ವಯ ಕೈಗೊಳ್ಳುವುದು.
12. ಸೆಪ್ಟೆಂಬರ್ ತಿಂಗಳ ಅಂತ್ಯದಲ್ಲಿ ಅನುಮೋದಿತ ಎಂ.ಪಿ.ಕ್ ನ ಶೇ.50 ರಷ್ಟು ಪ್ರಗತಿಯನ್ನು ಸಾಧಿಸುವುದು.
13. ಮಾನ್ಯ ಮುಖ್ಯ ಮಂತ್ರಿಗಳು, ಸಚಿವರು ಮತ್ತು ಇತರೆ ಗಣ್ಯ ವ್ಯಕಿಗಳ ಕೊಠಡಿಗಳಿಗೆ ಹೂದಾನಿಗಳನ್ನು ಹಾಗೂ ಒಳಾಂಗಣ ಗಿಡಗಳನ್ನು ಜೋಡಿಸುವುದು.
14. **ತೋಟಗಾರಿಕೆ ಇಲಾಖೆಯ ಒಡೆತನದಲ್ಲಿರದ ಇತರೆ ಖಾಸಗಿ/ಸಂಘ ಸಂಸ್ಥೆಗಳಿಗೆ ಸೇರಿದ ಪ್ರದೇಶಗಳಲ್ಲಿ ಇಲಾಖಾ ಅನುದಾನ ಬಳಸಿ ಉದ್ಯಾನವನ ಅಭಿವೃದ್ಧಿ/ನಿರ್ವಹಣಾ ಕಾರ್ಯವನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ.**
15. ಸಸ್ಯ ಸಂಪತ್ತನ್ನು ವೃದ್ಧಿಸಿ, ಸಂರಕ್ಷಿಸಿ, ಪ್ರಸರಣಾ ಕಾರ್ಯಕೈಗೊಳ್ಳಲು ಹೆಚ್ಚು ಒತ್ತು ನೀಡುವುದು.
16. ಸಸ್ಯಶಾಸ್ತ್ರೀಯ ತೋಟಗಳಲ್ಲಿ ಅಪರೂಪದ ದೇಶಿಯ ಹಾಗೂ ವಿದೇಶಿಯ ಸಸ್ಯ ಪ್ರಭೇದಗಳನ್ನು ಪರಿಚಯಿಸಲು ಆಧ್ಯತೆ ನೀಡುವುದು.
17. ಉದ್ಯಾನವನಗಳು, ಗಿರಿಧಾಮಗಳು ಹಾಗೂ ಸಸ್ಯಶಾಸ್ತ್ರೀಯ ತೋಟಗಳಲ್ಲಿ ನೀರು ಹಾಗೂ ಮಣ್ಣಿನ ಸಂರಕ್ಷಣೆಗೆ ಒತ್ತುನೀಡಿ, ಒಟ್ಟಾರೆ ಪರಿಸರ ಸ್ನೇಹಿ ವಾತಾವರಣವನ್ನು ಕಲ್ಪಿಸಲು ಪೂರಕವಾದ ಎಲ್ಲಾ ಅವಶ್ಯ ಕ್ರಮಗಳನ್ನು ಅನುಸರಿಸುವುದು.
18. ಎಲ್ಲಾ ಗಿರಿಧಾಮಗಳು, ಉದ್ಯಾನವನಗಳು ಹಾಗೂ ಸಸ್ಯಶಾಸ್ತ್ರೀಯ ತೋಟಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವುದು.
19. ಗಿರಿಧಾಮಗಳ ವಾತಾವರಣಕ್ಕನುಗುಣವಾಗಿ ಶೀತವಲಯದ ಸಸ್ಯ ಪ್ರಭೇದಗಳ ಪರಿಚಯ, ಸಂರಕ್ಷಣೆ ಹಾಗೂ ಪ್ರಸರಣೆಗೆ ಆಧ್ಯತೆ ನೀಡುವುದು.
20. ಸಸ್ಯಾಗಾರಗಳಲ್ಲಿ ಸೂಕ್ತ ಅಲಂಕಾರಿಕ ಗಿಡಗಳ ಹಾಗೂ ಇತರೆ ಸಸ್ಯಪ್ರಭೇದಗಳನ್ನು ಕಾಲ ಕಾಲಕ್ಕೆ ಉತ್ಪಾದಿಸಿ ಮಾರಾಟ ಮಾಡುವುದು.
21. ಎಲ್ಲಾ ಉದ್ಯಾನವನಗಳು, ಸಸ್ಯತೋಟಗಳು ಹಾಗೂ ಗಿರಿಧಾಮಗಳಲ್ಲಿ ಮೂಲ ಆಶಯಕ್ಕೆ ಧಕ್ಕೆ ಬಾರದ ರೀತಿ ಆದಾಯ ತರುವ ಚಟುವಟಿಕೆಗಳನ್ನು ಕೈಗೊಳ್ಳುವುದರ ಮುಖೇನ ಸ್ವಾವಲಂಬನೆಗೆ ಒತ್ತು ನೀಡುವುದು.

**ನಿರ್ದೇಶಕರು**